ಶ್ರೀ ಆರ್. ಅಶೋಕ್ : ಮಾಡಿದ್ದಾರೆ. ನಾನು ಅವರ ವಿರುದ್ಧ ಮಾತನಾಡುವುದಿಲ್ಲ. ಒಳ್ಳೆಯ ವಿಷಯಕ್ಕೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನನ್ನ ಅಬ್ಜೆಕ್ಷನ್ ಇಲ್ಲ. ನಾನು ಹಿಂದೆ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಸರ್ಕಾರಿ ಶಾಲೆಗಳಿಗೆ ಜಾಗ ಬೇಕಾಗಿದ್ದರೂ ಸಹ ಪ್ರೈವೇಟ್ ಶಾಲೆಗಳಿಗೆ ಏಕೆ ಕೊಡುತ್ತಾರೆನ್ನುವುದು ಬಹಳ ಯಕ್ಷ ಪ್ರಶ್ನೆ. ಈಗ ನನ್ನ ಶಾಸಕ ಮಿತ್ರರು ಏನು ಹೇಳಿದ್ದಾರೆ, ಅದಕ್ಕೆ ನನ್ನ ಅನುಮೋದನೆ ಇದೆ. ಅಲ್ಲಿ ನಗರಸಭೆ ಇರಬಹುದು, ಅಲ್ಲಿ ಇಬ್ಬರು ಶಾಸಕರು ಬರುತ್ತೇವೆ, ನಾವೆಲ್ಲಾ ಹೇಳಿದ್ದರೂ ಪ್ರೈವೇಟ್ ಶಾಲೆಗೆ ಸರ್ಕಾರಿ ಜಮೀನನ್ನು ಕೊಡುತ್ತಾರೆ. ಈ ರೀತಿಯಾಗಬಾರದೆನ್ನುವುದೇ ನನ್ನ ಮನವಿ.

31. ಮೇಲ್ಮನೆಯಲ್ಲಿ ತುಮಕೂರು ಜಿಲ್ಲಾ ಪರಿಷತ್ತಿನಲ್ಲಿ ನಡೆದ ಘಟನೆ ಬಗ್ಗೆ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿ ಹಕ್ಕುಚ್ಯುತಿ ಸಮಿತಿಯ ಪರಿಶೀಲನೆಗೆ ಕಳುಹಿಸುವುದರ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ನಿನ್ನೆ ಮೇಲ್ಮನೆಯಲ್ಲಿ ತುಮಕೂರು ಜಿಲ್ಲಾ ಪರಿಷತ್‌ನಲ್ಲಿ ನಡೆದ ಘಟನೆ ಮೇಲೆ ಅಲ್ಲಿಯ ಸದಸ್ಯರು ಒಬ್ಬರು ಎತ್ತಿದ ವಿಷಯದ ಮೇಲೆ ಹಕ್ಕುಚ್ಯುತಿ ಸಮಿತಿಯ ಮುಂದೆ ವಿಷಯ ಪ್ರಸ್ತಾಪವಾಗಿದೆ. ಆ ಜಿಲ್ಲಾ ಪರಿಷತ್ ಸಭೆಯಲ್ಲಿ ಈ ಮನೆಯ ಸದಸ್ಯರಾದ ನಾವುಗಳು ಬಹಳ ಜನ ಇದ್ದೆವು. ಮತ್ತೆ, ಈ ಮನೆಯ ಸದಸ್ಯರು ಇದ್ದುದ್ದು ಗೊತ್ತಿದ್ದರೂ ಕೂಡ ವಿಷಯವನ್ನು ಮರೆ ಮಾಚಿ, ನನಗೆ ಆ ಜಿಲ್ಲಾ ಪರಿಷತ್ ಸಭೆಯಲ್ಲಿ ಆಗಿದೆ ಎಂಬ ನೋವನ್ನು ಒಂದನ್ನೇ ಆಧಾರವಾಗಿಟ್ಟುಕೊಂಡು ಏನು ಹಕ್ಕುಚ್ಯುತಿಗೆ ರೆಫರ್ ಮಾಡಿದ್ದಾರೆ, ಮತ್ತೆ, ಆ ಆಧಾರದ ಮೇಲೆ ತುಮಕೂರು ಜಿಲ್ಲಾ ಪಂಚಾಯತ್ ಅನ್ನು ಸೂಪರ್‌ಸೀಡ್ ಮಾಡಲು ನಾವು ಯೋಚಿಸುತ್ತೇವೆಂದು ಅಲ್ಲಿನ ಸಭಾ ನಾಯಕರು, ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಇದರಿಂದ ನಮಗೆ ಈ ಮನೆಯಲ್ಲಿ ಕೆಲಸ ಮಾಡುತ್ತಿರುವ ಸದಸ್ಯರಿಗೆ ನಿಜವಾಗಿ ಹಕ್ಕುಚ್ಯುತಿಯಾಗಿದೆ. ನಾವು ಆ ಕಾಗದದಲ್ಲಿ ಬರೆದಿದ್ದೇವೆ. ಹಕ್ಕುಚ್ಯುತಿ ನಿರ್ಣಯ ಮಂಡನೆ ಮಾಡುವುದಕ್ಕಾಗದೇ ಇರುವುದರಿಂದ, ಅದಕ್ಕೆ ಸಮಯ ಇಲ್ಲದಿರುವುದರಿಂದ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ನಾವು ಪ್ರಸ್ತಾಪಿಸುತ್ತಿದ್ದೇವೆಂದು ಹೇಳಿದ್ದೇವೆ. ಕನಿಷ್ಠ ಸೌಜನ್ಯ, ನಮಗೊಂದು ಸೂಚನೆ ಕೊಟ್ಟು, ಆಲ್ಲೇನು ನಡೆಯಿತೆಂದು ಕೇಳಿ, ಇಂಥ ವಿಷಯಗಳನ್ನು ಮೇಲ್ಮನೆಯವರು ಹಕ್ಕುಚ್ಯುತಿಗೆ ರೆಫರ್ ಮಾಡಬೇಕಾದುದು ಸೌಜನ್ಯ. ಆ ಕೆಲಸ ಮಾಡಿಲ್ಲ. ಇವತ್ತು ತಕ್ಷಣ ಏನು ಈ ವಿಷಯಕ್ಕೆ ಹಕ್ಕುಚ್ಯುತಿ ನಿರ್ಣಯಕ್ಕೆ ಕೇಳಿದ್ದಾರೆ, ಹಕ್ಕುಚ್ಯುತಿ ಸಮಿತಿ ಮುಂದೆ ರೆಫರ್ ಮಾಡಿದ್ದಾರೆ, ಅದನ್ನು ತಡೆಹಿಡಿಯಬೇಕು. ವಿನಾಕಾರಣ ಒಬ್ಬೊಬ್ಬ ಸದಸ್ಯರು ಹೇಳುವ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು, ಜಿಲ್ಲಾ ಪರಿಷತ್ ಅಂಥ ಸ್ವಾಯತ್ತ ಸಂಸ್ಥೆಗಳನ್ನು, ಸಂವಿಧಾನಾತ್ಮಕವಾಗಿ ರಚನೆಯಾಗಿರುವ ಸಂಸ್ಥೆಗಳನ್ನು ಸೂಪರ್ ಸೀಡ್ ಮಾಡುತ್ತೇವೆನ್ನುವ ಹೇಳಿಕೆಗಳನ್ನು ಬಿಡಬೇಕೆಂದು

ನಾನು ತಮ್ಮ ಮೂಲಕ ಸಂಬಂಧಪಟ್ಟವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ, ಈ ಮನೆಯ ಇನ್ನೋರ್ವ ನನ್ನ ಸನ್ಮಿತ್ರರಾದ ಶ್ರೀನಿವಾಸ್‌ರವರು ಮತ್ತೆ, ನನ್ನ ಮೇಲೆ, ಮೇಲ್ಮನೆಯ ಸದಸ್ಯರೊಬ್ಬರು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿ, ಹಕ್ಕುಚ್ಯುತಿ ಸಮಿತಿಗೆ ಪರಿಶೀಲನೆಗೆ ಕಳುಹಿಸಿ ಕೊಟ್ಟಿರುವುದು, ಈ ಹಿನ್ನೆಲೆಯಲ್ಲಿ ನಾನು ನಿನ್ನೆ ಒಂದು ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಆ ಸೂಚನೆಯನ್ವಯ ಮೇಲ್ಮನೆ ಸದಸ್ಯರೂ, ಕೂಡ ನಾನು ಈ ಒಂದು ಸದನದ ಸದಸ್ಯನಾಗಿ, ಜಿಲ್ಲಾ ಪಂಚಾಯತ್ ಸಮಿತಿ ಸದಸ್ಯನಾಗಿ, ಕಾರ್ಯನಿರ್ವಹಿಸುವ ಸಂದರ್ಭದಲ್ಲಿ, ನನಗೆ ಕರ್ತವ್ಯವನ್ನು ನಿರ್ವಹಣೆ ಮಾಡಲಿಕ್ಕೆ ಚ್ಯುತಿಯನ್ನು ತಂದಿದ್ದಾರೆ. ಆ ಹಿನ್ನೆಲೆಯಲ್ಲಿ ಏನು ನನ್ನ ಒಂದು ಹಕ್ಕುಚ್ಯುತಿ ಆಗಿರುವುದನ್ನು ತಮ್ಮ ಗಮನಕ್ಕೆ ನಾನು ವಿವರವಾಗಿ ಹೇಳಲು ನನಗೆ ಅವಕಾಶ ಕೊಡಬೇಕು. ಈ ಒಂದು ಹಕ್ಕುಚ್ಯುತಿಯ ಸೂಚನೆಯನ್ನು ತಾವು ಹಕ್ಕುಚ್ಯುತಿ ಸಮಿತಿಗೆ ಪರಿಶೀಲನೆಗೆ ಕಳುಹಿಸಿಕೊಡಬೇಕೆಂದು ಹೇಳಿ, ನಾನು ತಮ್ಮಲ್ಲಿ ವಿನಯವಾಗಿ ಪ್ರಾರ್ಥಿಸುತ್ತೇನೆ. ಸನ್ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ, ಈ ಒಂದು ಘನತೆವೆತ್ತ ಸದನದ ಸದಸ್ಯನಾಗಿ ಸಾರ್ವಜನಿಕ ಜೀವನದಲ್ಲಿ ಕೆಲಸವನ್ನು ಮಾಡುವ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಗಳಿಂದ, ಹೆಚ್ಚು ಪ್ರಚಾರ ಪಡೆಯುವ ಉದ್ದೇಶದಿಂದ, ಈ ರೀತಿಯ ಹಕ್ಕುಚ್ಯುತಿ ನಿರ್ಣಯವನ್ನು ಮೇಲ್ಮನೆಯಲ್ಲಿ ಮಂಡಿಸಿರುವುದು.

ಅಧ್ಯಕ್ಷರು : ಈ ವಿಚಾರದಲ್ಲಿ ಮೇಲ್ಮನೆಯಲ್ಲಿ ಹಕ್ಕುಚ್ಯುತಿಯಾಗಿದೆ ಎನ್ನುವ ನಿರ್ಣಯವನ್ನು ಪಾಸ್ ಮಾಡಿದ್ದಾರೆ. ಅದನ್ನು ನನ್ನ ಗಮನಕ್ಕೆ ತಂದಿದ್ದೀರಿ. ನಾನು ಮೇಲ್ಮನೆಯ ಸಭಾಪತಿಗಳ ಜೊತೆ ಚರ್ಚೆ ಮಾಡಿ, ಈ ವಿಚಾರದಲ್ಲಿ ಸೂಕ್ತವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ನಿಜವಾಗಿಯೂ ಅಲ್ಲಿ ಪ್ರಸ್ತಾಪಿಸಲ್ಪಡಬೇಕಾದ ಅಗತ್ಯವಿದ್ದಿಲ್ಲ. ಈ ಹಕ್ಕುಚ್ಯುತಿಯ ಪ್ರಶ್ನೆ ಅದು ಹೊರಗಡೆ ಆಗಿರುವುದು. ಈ ಸದನದಲ್ಲಾಗಲಿ, ಆ ಸದನದಲ್ಲಿ ಆಗಿರುವ ಘಟನೆಯಲ್ಲ. ಆ ಸದಸ್ಯನಾಗಿ ನಿರ್ವಹಿಸುವ ಕರ್ತವ್ಯವೂ ಅದು ಆಗಿರಲಿಲ್ಲ. ಅದರ ಜೊತೆಗೆ, ತಾವು ಆಗಲೇ ಪರಾಮರ್ಶೆ ನೋಡಿದ್ದೀರಿ, ತಮ್ಮ ಹೇಳಿಕೆ ಕೂಡ ಇದೆ,

"Neither House of Parliament can claim or exercise any authority over a member of the other House. Consequently, neither House can take upon itself to punish any breach of privilege or contempt offered to it by a member or officer of the Other House".

ಈ ತರಹದಲ್ಲಿ ಶಕ್ದರ್ ಅಂಡ್ ಕೌಲ್‌ನಲ್ಲಿ ಪ್ರಸ್ತಾಪವಾಗಿರುವುದಿದೆ. ತಾವು ಕೂಡ ಬಹಳ ಮುಖ್ಯವಾದ ವಿಚಾರವನ್ನು ಇದರಲ್ಲಿ ಕಾಣಿಸಿದ್ದೀರಿ. ಇಂಥ ಒಂದು ಸಂದರ್ಭದಲ್ಲಿ, ರಾಜ್ಯಸಭೆಯಲ್ಲಿ ಆಗಿರುವ ನಡಾವಳಿಗಳ ಬಗ್ಗೆ,

ಲೋಕಸಭಾದ ವಿಚಾರ ಬಂದಾಗ, ಲೋಕಸಭೆಯ ಸ್ಪೀಕರ್‌ರವರುಈ ಪತ್ರವನ್ನು ಕೂಡ ಬರೆದಿದ್ದಾರೆ.

"On 30th March, 1970, during the course of a debate in Rajya Sabha, a member of the House made certain allegations against a member of Lok Sabha. After some discussion in the House, the Speaker addressed a letter to the Chairman, Rajya Sabha, inviting his attention to the matter and observing, inter alia, as follows:

'You will agree that it is not desirable for members of one House to make allegations or cast reflections on the floor of the House on the members of the other House.'

In his reply, the Chairman, Rajya Sabha, expressing his agreement with the Speaker, and stated that the Deputy Chairman, Rajya Sabha had already expressed his dis-approval of the member's speech. ಇದು ಮುಂದೆ ಇರುವುದರಿಂದ, ಈ ವಿಚಾರಗಳಲ್ಲಿ ತಾವು ಈಗಾಗಲೇ ಹೇಳಿದಂತೆ, ಸದನಕ್ಕೆ ತಾವು ತಿಳಿಸಿದಂತೆ, ಒಂದು ಪತ್ರವನ್ನು ಮೇಲ್ಮನೆಯ ಸಭಾಪತಿಗಳಿಗೆ ಬರೆದು, ಇಲ್ಲಿರುವ ಗೌರವಾನ್ವಿತ ನಮ್ಮ ಸದಸ್ಯರ ಬಗ್ಗೆ ಅಲ್ಲಿ ಆಗಿರುವುದು, ಈ ಹಕ್ಕುಚ್ಯುತಿ ಆಗುವುದು ಅಲ್ಲ, ಮತ್ತು ಪ್ರಿವಿಲೆಜ್ ಕಮಿಟಿಗೆ ಬರತಕ್ಕಂಥದ್ದು ಅಲ್ಲವೆನ್ನುವ ರೀತಿಯಲ್ಲಿ ತಾವೊಂದು ಪತ್ರವನ್ನು ಬರೆದು ಕಳುಹಿಸಿ, ಪ್ರಾಯಶಃ ಅದನ್ನು ನಿಮ್ಮ ಮಟ್ಟದಲ್ಲೇ ಬಗೆಹರಿಸಿ, ಅದನ್ನು ಇಲ್ಲಿಗೇ ಬಿಡತಕ್ಕಂಥದ್ದು ಸೂಕ್ತವೆಂದು ನಾನು ಭಾವಿಸಿದ್ದೇನೆ.

ಅಧ್ಯಕ್ಷರು : ಮಾನ್ಯ ಸಭಾಪತಿಯವರ ಜೊತೆ ಮಾತನಾಡಿ ನಾನು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3.15 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು).

(ಸದನವು ಪುನಃ ಮಧ್ಯಾಹ್ನ 3 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು).

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

6. ಪ್ರಕಟಣೆ

ಅಧ್ಯಕ್ಷರು : ಈಗೊಂದು ಪ್ರಕಟಣೆ.

"ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶ ಒಂದು ಬಂದಿರುತ್ತದೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ ದಿನಾಂಕ 4ನೇ ಆಗಸ್ಟ್ 2004ರಂದು ಕರ್ನಾಟಕ ಧನ ವಿನಿಯೋಗ ಸಂಖ್ಯೆ 2 ವಿಧೇಯಕ 2004ನ್ನು ಯಾವುದೇ ತಿದ್ದುಪಡಿ ಇಲ್ಲದೆ ವಿಧಾನ ಪರಿಷತ್‌ನಲ್ಲಿ ಅಂಗೀಕೃತವಾಗಿದೆ ಎಂದು ತಿಳಿಸಿರುತ್ತಾರೆ".